ಆ) ಈ ವಿಮಾನ ನಿಲ್ದಾಣಗಳ ನಿರ್ಮಾಣ ಕಾರ್ಯವು ಯೋಜನಾ ಅಭಿವೃದ್ಧಿ ಒಪ್ಪಂದಕ್ಕೆ ಸಹಿ ಮಾಡಿದ 2 ವರ್ಷಗಳಲ್ಲಿ ಮುಕ್ತಾಯಗೊಳ್ಳುವ ನಿರೀಕ್ಷೆಯಿದ್ದು ಇನ್ನೂ ಯಾವುದೂ ಪೂರ್ಣಗೊಂಡಿಲ್ಲ.

ಇ) ಬೀದರ್‌ನಲ್ಲಿರುವ ರಕ್ಷಣಾ ಮಂತ್ರಾಲಯದ ವಿಮಾನ ನಿಲ್ದಾಣದಲ್ಲಿ ನಾಗರೀಕ ವಿಮಾನಯಾನ ಸೇವೆ ಪ್ರಾರಂಭಿಸಲು ರಕ್ಷಣಾ ಮಂತ್ರಾಲಯದಿಂದ ತಾತ್ಪೂರ್ತಿಕ ಅನುಮತಿ ನೀಡಲಾಗಿದ್ದು, ಇದಕ್ಕಾಗಿ ಹೊಸ ಟರ್ಮಿನಲ್ ಕಟ್ಟಡವನ್ನು ನಿರ್ಮಿಸಲಾಗಿದೆ. ಆದರೆ ಈ ವಿಮಾನ ನಿಲ್ದಾಣವು ಹೈದರಾಬಾದ್ ರಾಜೀವ್ ಗಾಂಧಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 150 ಕಿ.ಮೀ. ಅಂತರದ ಒಳಗೆ ಬರುವುದರಿಂದ ಕೇಂದ್ರ ಸರ್ಕಾರದ ನಾಗರೀಕ ವಿಮಾನಯಾನ ನೀತಿಯ ಅನುಸಾರ ಹೈದರಾಬಾದ್ ವಿಮಾನಯಾನ ನಿಲ್ದಾಣದಿಂದ 150 ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ನಾಗರೀಕ ವಿಮಾನಯಾನ ಸೇವೆ ಪ್ರಾರಂಭಿಸಲು ಅವಕಾಶವಿಲ್ಲವೆಂದು ಇದಕ್ಕೆ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಅನುಮೋದನೆಯನ್ನು ನೀಡಿರುವುದಿಲ್ಲ. ಈ ಬಗ್ಗೆ ಹೈದರಾಬಾದ್‌ನ ರಾಜೀವ್‌ಗಾಂಧಿ ವಿಮಾನ ನಿಲ್ದಾಣದ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ. ಈ ಸಂಬಂಧ ಕೇಂದ್ರ ಸರ್ಕಾರದೊಂದಿಗೂ ಪತ್ರ ವ್ಯವಹಾರವನ್ನು ಮಾಡಲಾಗುತ್ತಿದೆ. ಕೇಂದ್ರ ಸರ್ಕಾರದಿಂದ ಅನುಮೋದನೆ ದೊರೆತ ನಂತರ ವಿಮಾನಯಾನವನ್ನು ಪ್ರಾರಂಭಿಸಲಾಗುವುದು.

ಈ) ಈ ವಿಮಾನ ನಿಲ್ದಾಣಗಳ ಕಾಮಗಾರಿಗೆ ಕಳೆದ 3 ವರ್ಷಗಳಲ್ಲಿ ಮಾಡಲಾದ ವೆಚ್ಚ ಈ ರೀತಿ ಇದೆ.

(ಲಕ್ಷ ರೂ.ಗಳಲ್ಲಿ)

| 2007–08 | 2008–09 | 2009–10 |
|---|---|---|
| ವೆಚ್ಚ ಮಾಡಲಾದ ಮೊತ್ತ | ವೆಚ್ಚ ಮಾಡಲಾದ ಮೊತ್ತ | ವೆಚ್ಚ ಮಾಡಲಾದ ಮೊತ್ತ |
| 4999.54 | 9550.82 | 9751.80 |

ಉ) ಈ ಯೋಜನೆಯನ್ನು ಖಾಸಗಿ – ಸಾರ್ವಜನಿಕ ಸಹಭಾಗಿತ್ವದಲ್ಲಿ ಕೈಗೊಳ್ಳಲಾಗುತ್ತಿದ್ದು, ಹಾಸಗಿ ಪ್ರವರ್ತಕರು ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳುತ್ತಾರೆ. ಸರ್ಕಾರದ ವತಿಯಿಂದ ಭೂ ಸ್ವಾಧೀನ ಕೈಗೊಂಡು ಅಭಿವೃದ್ಧಿದಾರರಿಗೆ ಹಸ್ತಾಂತರಿಸಲಾಗುತ್ತಿದೆ.

**ಮಂಗಳೂರು ಕ್ಷೇತ್ರದ ಕೊಳಚೆ ಪ್ರದೇಶಗಳ ಅಭಿವೃದ್ಧಿ**

809 (1131) ಶ್ರೀ ಖಾದರ್ ಯು.ಟಿ. (ಮಂಗಳೂರು): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೊಳಚೆ ಪ್ರದೇಶಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕೊಳಚೆ ಪ್ರದೇಶಗಳು ಎಲ್ಲೆಲ್ಲಿ ಇರುತ್ತವೆ; ಇವುಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):

ಅ) ಹೌದು.

ಆ) ಮಂಗಳೂರು ನಗರದಲ್ಲಿ 14 ಕೊಳಚೆ ಪ್ರದೇಶಗಳು ಈ ಕೆಳಕಂಡಂತೆ ಇರುತ್ತದೆ.

| | |
|---|---|
| 1. | ಮಠದಕೇರಿ |
| 2. | ಮಹಾಕಾಳಿ |
| 3. | ಕನಾಕವಾರ್ಡ್ |
| 4. | ಕೂಡಿಯನ್ ಗುತ್ತು ಹರಿಜನ್ ಕಾಲೋನಿ |
| 5. | ಹಂಪನ ಕಟ್ಟೆ |
| 6. | ಪಂಡೇಶ್ವರ್ |
| 7. | ಡೊಂಗರ ಕೇರಿ |
| 8. | ಭಾವಂತಿ ರಸ್ತೆ |